ಉದಯವಾಣಿ
ಕನ್ನಡ ದಿನಪತ್ರಿಕೆ

# ಜೈನ್ ವಿವಿಗೆ ಸಮಗ್ರ ಪ್ರಶಸ್ತಿ

**ಬೆಂಗಳೂರು:** ಆತಿಥೇಯ ಜೈನ್ ವಿವಿ ತಂಡ ವಿಜಾನ ಅಖಿಲ ಭಾರತ ಕ್ರೀಡಾ ಉತ್ಸವದಲ್ಲಿ ಸಮಗ್ರ ಪ್ರಶಸ್ತಿ ಬಾಚಿಕೊಂಡಿದೆ.

ಜೈನ್ ಕಾಲೇಜು ತಂಡ ವನಿತೆಯರ ಟೆನಿಸ್, ಪುರುಷ ಮತ್ತು ಮಹಿಳೆಯರ ಬ್ಯಾಡ್ಮಿಂಟನ್ ಮತ್ತು ಪುರುಷರ ಕ್ರಿಕೆಟ್ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದು ಸಮಗ್ರ ಪ್ರಶಸ್ತಿ ಪಡೆಯಿತು. ಪುರುಷರ ಟಿಟಿಯಲ್ಲಿ ಚೆನ್ನೈನ ಎಸ್ಆರ್ಎಂ ವಿವಿ, ವನಿತೆಯರ ಟಿಟಿಯಲ್ಲಿ ಚೆನ್ನೈನ ಎಂಒಪಿ ವೈಷ್ಣವ್ ಪ್ರಶಸ್ತಿ ಗೆದ್ದರೆ, ಪುರುಷರ ವಾಲಿಬಾಲ್‌ನಲ್ಲಿ ಚೆನ್ನೈನ ಎಸ್ಆರ್ಎಂ ವಿವಿ ತಂಡ ಪ್ರಶಸ್ತಿ ಗಳಿಸಿತು. ವನಿತೆಯರ ಟೆನಿಸ್‌ನಲ್ಲಿ ಜೈನ್ ವಿವಿಯ ಶಲಕಾ, ಪುರುಷ ಮತ್ತು ವನಿತೆಯರ ಬ್ಯಾಡ್ಮಿಂಟನ್‌ನಲ್ಲಿ ಪ್ರಕಾಶ್ ಜೋಲಿ ಮತ್ತು ಪೂರ್ವಿಶಾ ಶ್ರೇಷ್ಠ ಕ್ರೀಡಾಪಟುಗಳಾಗಿ ಹೊರಹೊಮ್ಮಿದರು.